ಸಾಕ್ಷಿಗೆ ಪುನಃ ಕರೆಯಿಸಿ ದಿಃ 04.12.2025 ಪ್ರಮಾಣ ವಚನ ಭೋಧಿಸಲಾಯಿತು.

ಆರೋಪಿ ಪರ ಹೆಚ್.ಡಿ.ಬಿ. ವಕೀಲರಿಂದ ಪಾಟೀ ಸವಾಲು

ಗುರುಮಿಠಕಲ್ ಪೋಲಿಸ ಠಾಣೆಯಲ್ಲಿ ನಾನು ಹೋಮ್ ಗಾರ್ಡ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಆಗಾಗಿ ನನಗೆ ಪೋಲಿಸರು ಮತ್ತು ಪೋಲಿಸ ಅಧಿಕಾರಿಗಳು ನನಗೆ ಪರಿಚಯ ಇರುತ್ತಾರೆ. ನಾನು ಮಧ್ಯವರ್ತಿಯಾಗಿ ಕೆಲಸ ಮಾಡುತ್ತೇನೆ ಅಂದರೆ ಸರಿಯಲ್ಲ. ಆರೋಪಿ ನಂ. 2 ರವರನ್ನು ಹೊರತುಪಡಿಸಿ ಉಳಿದ ಆರೋಪಿತರು ನಮ್ಮ ಕುಟುಂಬದವರಾಗಿರುತ್ತಾರೆ ಅಂದರೆ ಸರಿ. 1 ನೇ ಆರೋಪಿ ನನ್ನ ದೊಡ್ಡಪ್ಪನಾಗಿತ್ತಾನೆ ಎಂಬುದಕ್ಕೆ ಸಾಕ್ಷಿದಾರರು ನನ್ನ ದತ್ತಕ ತಂದೆಯಾಗಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ 4 ಮಹಾದೇವಪ್ಪ ಇವರು ನನ್ನ ತಂದೆಯಾಗಿರುತ್ತಾರೆ. ಚಾಸಾ 5 ಮೊಗಲಪ್ಪ ನನ್ನ ಸ್ವಂತ ಅಣ್ಣನಾಗಿರುತ್ತಾನೆ. ಚಾಸಾ 6 ರಿಂದ 10 ಇವರು ನನಗೆ ಬೇಕಾದವರಾಗಿದ್ದು ಮತ್ತು ನಮ್ಮ ಸಮಾಜದವರಾಗಿದ್ದು ನಾನು ಕರೆದಲ್ಲಿಗೆ ಬರುತ್ತಾರೆ ಅಂದರೆ ಸರಿಯಲ್ಲ. ಚಾಸಾ 6 ರಿಂದ 10 ನಮ್ಮ ಊರಿನವರಾಗಿರುತ್ತಾರೆ. ನಾನು ಕರೆದಲ್ಲಿಗೆ ಬರುತ್ತಾರೆ, ನನ್ನ ಪರವಾಗಿ ಸಾಕ್ಷಿ ಹೇಳುತ್ತಾರೆ ಅಂದರೆ ಸರಿಯಲ್ಲ. ನಮ್ಮ ತಂದೆಯವರು ಮತ್ತು ಅವರ ಸಹೋದರರ ನಡುವೆ ಪಾಲು ಆಗಿ ಸುಮಾರು 30 ವರ್ಷಗಳು ಆಗಿರುತ್ತವೆ ಎಂಬುದಕ್ಕೆ ಸಮಾರು 25 ವರ್ಷಗಳು ಆಗಿವೆ ಪಾಲು ಆಗಿರುತ್ತವೆ ಎಂದು ಹೇಳುತ್ತಾರೆ. ಮನೆಯಲ್ಲಿ ಬಾಗ ಮಾಡಿಕೊಂಡು ನಮ್ಮ ತಂದೆ ಮತ್ತು ಸಿದ್ರಾಮಪ್ಪ ಮತ್ತು 1 ನೇ ಆರೋಪಿ ಮನೆಯಲ್ಲಿ ಬೇರೆ ಬೇರೆಯಾಗಿ ವಾಸವಾಗಿರುತ್ತಾರೆ. ಮನೆಗೆ ಒಂದೇ ತಲಬಾಗಿಲು ಇರುತ್ತದೆ ಅಂದರೆ ಸರಿ. ದಿಃ 05-06-2016 ರಂದು ಸಂಜೆ 7-00 ಗಂಟೆ ಸುಮಾರು ನಾನು 4 ನೇ ಆರೋಪಿಯೊಂದಿಗೆ ಜಗಳ ಮಾಡಿರುತ್ತೀರಿ ಎಂಬುದಕ್ಕೆ ಸಾಕ್ಷಿದಾರರು ಜಗಳ ನಾವು ಮಾಡಿರುವುದಿಲ್ಲ ಅವರು ನಮ್ಮ ಜೊತೆ 3 ವರ್ಷಗಳಿಂದ ತಕರಾರು ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ.

ಅವರು ತಕರಾರು ಮಾಡಿರುವುದಿಲ್ಲ, ನಾವು ಜಗಳ ಮಾಡುತ್ತಿದ್ದಾಗ 1 ನೇ ಆರೋಪಿ ಬಂದು ಏಕೆ ಜಗಳ ಮಾಡುತ್ತಿರಿ ಎಂದು ಕೇಳಿರುತ್ತಾರೆ. ಆಗ ನಾನು ಒನಕೆಯಿಂದ 1 ನೇ ಆರೋಪಿಗೆ ಹೊಡೆದಿರುತ್ತೇನೆ ಅಂದರೆ ಸರಿಯಲ್ಲ. ಆಗ ಚಾಸಾ 3 ಇವರು ಬಡಿಗೆಯಿಂದ 1 ನೇ ಆರೋಪಿಗೆ ಹೊಡೆದಿರುತ್ತಾನೆ ಅಂದರೆ ಸರಿಯಲ್ಲ. ನಮ್ಮ ತಂದೆಯವರು ನಮ್ಮಗೆ ಪ್ರಚೋದನೆ ಮಾಡಿ 1 ನೇ ಆರೋಪಿಗೆ ಹಿಡಿದುಕೊಂಡಿದು, ಆಗ ನಾವು 1 ನೇ ಆರೋಪಿಗೆ ಹೊಡೆದಿರುತ್ತೇವೆ ಅಂದರೆ ಸರಿಯಲ್ಲ. ದಿಃ 06-05-2011 ರಂದು 1 ನೇ ಆರೋಪಿ ನನ್ನನ್ನು ದತ್ತಕ ತೆಗೆದುಕೊಂಡಿರುತ್ತಾನೆ. ದತ್ತಕ ತೆಗೆದುಕೊಂಡ ಬಗ್ಗೆ ನನ್ನ ಹತ್ತಿರ ದಾಖಲೆ ಇರುತ್ತವೆ. ಪಂಚರ ಸಮಕ್ಷಮ ನಮ್ಮ ಮನೆಯಲ್ಲಿ ದತ್ತಕ ಪತ್ರ ಬರೆದಿರುತ್ತಾರೆ. 1 ನೇ ಆರೋಪಿ ಆಸ್ತಿಯನ್ನು ನುಂಗಬೇಕು ಎಂಬ ಉದ್ದೇಶದಿಂದ 1 ನೇ ಆರೋಪಿ ನನ್ನ ದತ್ತಕ ತಂದೆ ಎಂದು ಈಗ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಆರೋಪಿಗೆ ಮದುವೆ ಆಗಿತ್ತು. 1 ನೇ ಆರೋಪಿ ಸುಲೋಚನ ಎಂಬುವರೊಂದಿಗೆ ಮದುವೆ ಆಗಿದ್ದರು. 1 ನೇ ಆರೋಪಿ ಹಾಗೂ ಸುಲೋಚನ ಅವರ ವೈವಾಹಿಕ ಜೀವನದಿಂದಾಗಿ ಒಂದು ಹೆಣ್ಣು ಮಗು ಜನಿಸಿರುತ್ತದೆ. ಆ ಹೆಣ್ಣು ಮಗುವಿನ ಹೆಸರು ಸಂಗೀತ ಎಂದು ಇರುತ್ತದೆ. ದಿಃ 28-11-2009 ರಂದು ಈ ಸಂಗೀತರವರು ಮೃತಪಟ್ಟಿರುತ್ತಾರೆ. ಸುಲೋಚನ ಇವರಿಗೆ ಲಕ್ವ ಹೊಡದು ಸುಮಾರು ವರ್ಷಗಳಿಂದ ಅನಾರೋಗ್ಯದಿಂದ ಬಲಳುತ್ತಿದ್ದರು ಅಂದರೆ ಸರಿ. ತದ ನಂತರ 1 ನೇ ಆರೋಪಿ ದೇವಮ್ಮ ಎಂಬುವ ಮಹಿಳೆಯನ್ನು ಮದುವೆ ಮಾಡಿಕೊಂಡಿದ್ದರು ಅಂದರೆ ಸರಿಯಲ್ಲ. ದೇವಮ್ಮ ಇವರಿಗೆ ನಾಲ್ಕು ಜನ ಮಕ್ಕಳಿರುತ್ತಾರೆ ಅಂದರೆ ಸಾಕ್ಷಿದಾರರು ದೇವಮ್ಮ ಇವರು 1 ನೇ ಆರೋಪಿಯ ಹೆಂಡತಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ದೇವಮ್ಮ ಇವರು 1 ನೇ ಆರೋಪಿಯ 2 ನೇ ಹೆಂಡತಿ ಆಗಿರುವುದಿಲ್ಲವೆಂದು ದುರುದ್ದೇಶದಿಂದ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಶಾಲಾ ದಾಖಲೆಗಳಲ್ಲಿ ನನ್ನ ತಂದೆಯ ಹೆಸರು ಮಹಾದೇವಪ್ಪ ಎಂದು

ಇರುತ್ತದೆ. ನಿಪಿ 1 ರಲ್ಲಿ ನಾನು ನನ್ನತಂದೆಯ ಹೆಸರು ಮಹಾದೇವಪ್ಪ ಎಂದು ಬರೆದಿರುತ್ತೇನೆ. ಆದರೆ ಯಾವ ಕಾರಣಕ್ಕಾಗಿ ಮಹಾದೇವಪ್ಪ ಎಂದು ಬರೆದಿರುತ್ತೀರಿ ಅಂದರೆ ಸಾಕ್ಷಿದಾರರು ಪೋಲಿಸರು ನನ್ನನ್ನು ವಿಚಾರಿಸಿ ದಾಖಲೆಗಳನ್ನು ಕೇಳಿದರು. ಆ ದಾಖಲಾತಿಗಳಲ್ಲಿ ಸಾಬಪ್ಪ ತಂದೆ ಮಹಾದೇವಪ್ಪ ಎಂದು ಬರೆದಿದ್ದು, ಆಗಾಗಿ ನಿಪಿ 1 ರಲ್ಲಿ ನನ್ನ ತಂದೆ ಮಹಾದೇವಪ್ಪ ಎಂದು ಬರೆದಿರುತ್ತದೆ ಎಂದು ನುಡಿಯುತ್ತಾರೆ. ಗುರುಮಿಠಕಲ್ ಪೋಲಿಸ ಠಾಣೆಯಲ್ಲಿ ದಿಃ 30-08-2017 ರಂದು ಇದೇ ಆರೋಪಿತರ ಮೇಲೆ ದೂರು ಕೊಟ್ಟಿರುತ್ತೆನೆ ಅಂದರೆ ಸರಿ. ಗುನ್ನೆ 234/2017 ರಲ್ಲಿ ನನ್ನ ತಂದೆಯ ಹೆಸರು ಮಹಾದೇವಪ್ಪ ಎಂದು ಬರೆದಿರುತ್ತದೆ ಅಂದರೆ ಸರಿ. ಗುನ್ನೆ ಸಂ. 234/2017 ರಲ್ಲಿ ಈ ದೂರು ಕೊಡುವುದಕ್ಕಿಂತ ಮುಂಚೆ ಆರೋಪಿತರ ಮೇಲೆ ಮರಣಾಂತಿಕ ಹಲ್ಲೆ ಮಾಡಿದರ ಬಗ್ಗೆ ಕೇಸು ದಾಖಲಾಗಿರುತ್ತದೆ. ಅದರಂತೆಯೇ ಈ ಕೇಸಿನಲ್ಲಿ ಹೆಸರು ಬಂದಿರುತ್ತದೆ. ಈ ಮೊದಲು ನನ್ನ ತಂದೆ ಹೆರು ತಪ್ಪಾಗಿರುತ್ತದೆ ಎಂದು ನಾನು ಏನಾದರೂ ಹೇಳಿರುವುದಿಲ್ಲ. ಗುನ್ನೆ ಸಂ. 234/2017 ತನಿಖೆ ಮಾಡಿದ ನಂತರ ಪೋಲಿಸರು ದೋಷರೋಪಣಾ ಪಟ್ಟಿ ಸಲ್ಲಿಸಿದ್ದು, ಅದು ಸಿಸಿ ನಂ. 136/2018 ಎಂದು ಆಗಿದ್ದು, ಅದರಲ್ಲಿ ನ್ಯಾಯಾಲಯ ಆರೋಪಿತರನ್ನು ಬಿಡುಗಡೆ ಮಾಡಿದ್ದು, ಬಿಡುಗಡೆ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿರುತ್ತೇನೆ ಅಂದರೆ ಸರಿ. ಸಿಸಿ ನಂ. 136/218 ರಲ್ಲಿ ದಿಃ 15-11-2022 ರಂದು ನಾನು ಸಾಕ್ಷಿ ನುಡಿದಿದ್ದು, ಅದರಲ್ಲಿ ನನ್ನ ತಂದೆಯ ಹೆಸರು ಮಹಾದೇವಪ್ಪ ಎಂದು ಬರೆದಿರುತ್ತದೆ ಅಂದರೆ ಸರಿ. ಸುಲೋಚನ ಇವರ ಆರೋಗ್ಯ ಸರಿ ಇಲ್ಲದ ಕಾರಣ 1 ನೇ ಆರೋಪಿ ದೇವಮ್ಮ ಎಂಬುವವರನ್ನು 2 ನೇ ಮದುವೆಯಾಗಿದ್ದು, ಇವರಿಗೆ ನಾಲ್ಕು ಜನ ಮಕ್ಕಳು ಜನಿಸಿರುತ್ತಾರೆ ಅಂದರೆ ಸಾಕ್ಷಿದಾರರು ಸುಲೋಚನ ಅಂದರೆ ನನ್ನ ತಾಯಿ 2014 ರಂದು ಲಕ್ವ ಆಗಿದ್ದರಿಂದ ದೇವಮ್ಮ ಎನ್ನುವವರು ಅವರನ್ನು ನೋಡಿಕೊಳ್ಳಲು ಕೆಲಸಕ್ಕೆ ಅಂತ ಹೇಳಿ ಮನೆಗೆ ಕರೆಸಿರುತ್ತಾರೆ ಎಂದು ನುಡಿಯುತ್ತಾರೆ. ದೇವಮ್ಮ ಇವರ

ತವರು ಮನೆ ಯಾವುದು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯವರಿಗೆ ಸದರಿ ವಿಷಯ ಗೊತ್ತಿದೆಯೋ ಅಥವಾ ಇಲ್ಲವೆಂದು ನನಗೆ ಗೊತ್ತಿಲ್ಲ. ನಾನು ಬಿ.ಎ. ಎಂ. ಎಸ್.ಡಬ್ಲ್ಯೂ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ ಇವರು ಅವಿದ್ಯಾಂವತರಾಗಿರುತ್ತಾರೆ. ದೇವಮ್ಮ ಇವರಿಗೆ ನಾನು ನೀವು ಎಲ್ಲಿಯವರು ಎಂದು ನಾನು ಅವರನ್ನು ವಿಚಾರಿಸಿರುವುದಿಲ್ಲ. ದೇವಮ್ಮ ಇವರು 2014 ರಿಂದ 2016 ರ ವರೆಗೆ 1 ನೇ ಆರೋಪಿಯ ಮನೆಯಲ್ಲಿ ಕೆಲಸ ಮಾಡಿರುತ್ತಾರೆ. 1 ನೇ ಆರೋಪಿ ದೇವಮ್ಮ ಇವರನ್ನು ಮದುವೆಯಾಗಿದ್ದು, ಅವರ ವೈವಾಹಿಕ ಜೀವನದಿಂದಿಾಗಿ ನಾಲ್ಕು ಮಕ್ಕಳು ಜನಿಸಿದ್ದು, ಅವರು ಮದುವೆಯಾಗಿರುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ತಂದೆ ಮಹಾದೇವಪ್ಪ ತಂದೆ ಮಶಪ್ಪ ಎನ್ನುವುದಕ್ಕೆ ಸಾಕ್ಷಿದಾರರು ನನ್ನ ಜನ್ಮಕ್ಕೆ ಕಾರಣಕರ್ತರು ಎಂದು ಹೇಳುತ್ತಾರೆ. ನನ್ನ ತಂದೆಯವರು ದೇವಮ್ಮನ ಮೇಲೆ ಸರ್ವೆ ನಂ. 415/13 ರ ಮೇಲೆ ನನ್ನ ತಂದೆಯವರು ಓ.ಎಸ್. ನಂ. 193/2022 ಹಾಕಿರುತ್ತಾರೆ ಅಂದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲವೆಂದು ನುಡಿಯುತ್ತಾರೆ. ಓ.ಎಸ್. ನಂ. 193/2022 ರನ್ನು ದುರುದ್ದೇಶದಿಂದ ನಾನೇ ಚಾಸಾ 1 ರವರ ಮುಖಾಂತರ ದೇವಮ್ಮಳ ಮೇಲೆ ಹಾಕಿಸಿರುತ್ತೆನೆ ಅಂದರೆ ಸರಿಯಲ್ಲ. ಓ.ಎಸ್. ನಂ. 193/2022 ರಲ್ಲಿ ನನ್ನ ತಂದೆ ಚಾಸಾ 1 ಇವರು ನ್ಯಾಯಾಲಯ ಮುಂದೆ ದಿಃ 06-09-2022 ರಂದು ವಾದಿ ಮತ್ತು ಪ್ರತಿವಾದಿ ಪರಸ್ಪರ ಸಂಬಧಿಗಳಾಗಿದ್ದು, ಪ್ರತಿವಾದಿಯು ವಾದಿಯ ಸಹೋದರ ದಿಃ ಚಂದ್ರಪ್ಪನ ಹೆಂಡತಿಯಾಗಿದ್ದು, ವರಸೆಯಲ್ಲಿ ವಾದಿಯ ಅತ್ತಿಗೆ ಆಗಬೇಕು ಎಂದು ಮತ್ತು ವಾದಿಯು ಪ್ರತಿವಾದಿಯ ಮೈದುನನಾಗಿರುತ್ತಾನೆ ಎಂದು ನುಡಿದಿರುತಾರೆ ಎಂಬುದಕ್ಕೆ ಸಾಕ್ಷಿದಾರರು ಅದರ ಬಗ್ಗೆ ನನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಓ.ಎಸ್. ನಂ. 193/2022 ಹಿಂತೆಗೆದುಕೊಂಡು ಅದೇ ಸರ್ವೆ ನಂಬರ ಮೇಲೆ ಅದೇ ದಾವಾ ಕಾರಣ ಮೇಲೆ ಓ.ಎಸ್. ನಂ. 89/2024 ನ್ನು

ಆರೋಪಿತರಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿತರ ಕುಟುಂಬದ ಎಲ್ಲಾ ಸದಸ್ಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶಂದ ಓ.ಎಸ್. ನಂ. 89/2024 ನ್ನು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ಓ.ಎಸ್. ನಂ. 89/2024 ರಲ್ಲಿ ನನ್ನ ತಂದೆ ಚಾಸಾ 1 ರವರು ವಂಶಾವಳಿಯಲ್ಲಿ ದೇವಮ್ಮ ಇವರು 1 ನೇ ಆರೋಪಿ ಚಂದ್ರಪ್ಪನ ಹೆಂಡತಿ ಎಂದು ಹೇಳಿರುತ್ತಾರೆ ಅಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಹಾಗೂ ಮಾಹಿತಿ ಇಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಆರೋಪಿ ಮೃತಪಟ್ಟ ಮೇಲೆ ದೇವಮ್ಮ ಇವರು ಕಾನೂನು ಪ್ರಕಾರ ಬರಬೇಕಾದಂತಹ ಕುಟುಂಬ ಬೇನಿಫಿಟ್ ಪಡೆಯುವುದಕ್ಕಾಗಿ ಅರ್ಜಿ ಹಾಕಿದಳು ಅಂದರೆ ಸಾಕ್ಷಿ ಸರ್ವಿಸ್ ಬೇನಿಫಿಟಿ ಪಡೆದುಕೊಂಡಿರುತ್ತಾಳೆ ಎಂದು ನುಡಿಯುತ್ತಾರೆ. ಅವರಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಕ್ಷರ ಇವರು ನನ್ನ ಅಕ್ಕ ಸಂಗೀತರ ಮಗಳಾಗಿರುತ್ತಾಳೆ. ಈ ರೀತಿಯಾಗಿ ನಾನು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ದೇವಮ್ಮ ಮತ್ತು ಅವರ ಮಕ್ಕಳಾದ ಮೌನೇಶ, ಕೈಲಾಸ, ಮಾರುತಿ ಮತ್ತು ಮಹೇಶ್ವರಿ ಇವರು ಎಲ್ಲಾ ಸೇರಿ ಅಕ್ಷರ, ಸಾಯಿಬಣ್ಣ ಮತ್ತು ಜಿಲ್ಲಾಧಿಕಾರಿ ಹಾಗೂ ಡಿ.ಡಿ.ಪಿ.ಐ. ಯಾದಗಿರಿ ಹಾಗೂ ಬಿ.ಇ.ಓ. ಇವರ ಮೇಲೆ ಓ.ಎಸ್. ನಂ. 17/2017 ಸಲ್ಲಿಸಿದ್ದರು ಅಂದರೆ ಸಾಕ್ಷಿಯು ಇದೇ ಮೊದಲು ಸಾರಿ ನೋಡುತ್ತಿದ್ದೆನೆ ಎಂದು ನುಡಿಯುತ್ತಾರೆ. ಅಕ್ಷರು ಎನ್ನುವವರು ಈಗ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ಅಕ್ಷರ ಇವರ ಪಾಲನೆ ಪೋಷಣೆಯನ್ನು ನನ್ನ ತಾಯಿಯ ತಮ್ಮನಾದ ಸಾಯಿಬಣ್ಣ ಇವರು ಪೋಷಣೆ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸಾಯಿಬಣ್ಣ ಇವರಿಗೆ ಮಕ್ಕಳಿರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಆ ಸಾಯಿಬಣ್ಣ ಇವರು ದತ್ತಕ ತೆಗೆದುಕೊಂಡಿದ್ದು, ಅಕ್ಷರ ಇವರು ದತ್ತಕ ಮಗಳಾಗಿರುತ್ತಾಳೆ ಅಂದರೆ ಸಾಕ್ಷಿಯು ಪೋಷಣಾ

ಮಾಡುತ್ತಾರೆ ಅದರೆ ದತ್ತಕ ತೆಗೆದುಕೊಂಡಿರುತ್ತಾರೆ ಅಥವಾ ಇಲ್ಲವೆಂದು ನನಗೆ ಗೊತ್ತಿವೆಂದು ನುಡಿಯುತ್ತಾರೆ. ಓ.ಎಸ್. ನಂ. 17/2017 ದೇವಮ್ಮ ಮತ್ತು ಅವರ ಮಕ್ಕಳು ಸಾಯಿಬಣ್ಣ ಮತ್ತು ಅಕ್ಷರ ಇವರು ರಾಜೀ ಮೂಲಕ ಪ್ರಕರಣವನ್ನು ಇತ್ಯರ್ಥಪಡಿಸಿಕೊಂಡಿರುತ್ತಾರೆ ಅಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ನಾನು ಸಂಬಂಧಿತನಾಗಿರುವುದಿಲ್ಲ ಆದರೂ ಸಹ ನಾನು ಎಲ್ಲಾ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸಾಕ್ಷಿದಾರರು ನಾನು ಆ ಕುಟುಂಬಕ್ಕೆ ಸಂಬಂಧಿತನಾಗಿರುತ್ತೆನೆ ಆದರೆ ಆ ದಾವಾ ಬಗ್ಗೆ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಈ ಎಲ್ಲಾ ದಾವಾಗಳು ಆಗಲು ಹಾಗೂ ಕುಟುಂಬಕ್ಕೆ ಅನ್ಯಾಯವಾಗಲು ನಾನೇ ಕಾರಣವಾಗಿರುತ್ತೆನೆ ಅಂದರೆ ಸರಿಯಲ್ಲ. ಓ.ಎಸ್. ನಂ. 17/2017 ರಾಜೀ ಆದ ಮೇಲೆ ನಾನು ಸ್ವತಃ ಈ ಎಲ್ಲಾ ಆರೋಪಿತರ ಕುಟುಂಬದ ಮೇಲೆ ಓ.ಎಸ್. ನಂ. 101/2025 ಮಾಡಿರುತ್ತೇನೆ ಅಂದರೆ ಸರಿ. ಸದರಿ ದಾಖಲೆಯನ್ನು ನಿಪಿ ಡಿ1 ಎಂದು ಗುರುತಿಸಲಾಯಿತು. ಈ ಎಲ್ಲಾ ಸರ್ವಿಸ್ ಬೇನಿಫಿಟ ಪಡೆಯುವುದಕ್ಕಾಗಿ ಸೃಷ್ಟಿ ಮಾಡಿ ಹಾಕಿಸಿರುತ್ತೇನೆ ಅಂದರೆ ಸರಿಯಲ್ಲ.

ನಿಡಿ 1 ರ ಪ್ಯಾರಾ ನಂ. 10 ರಲ್ಲಿ ಓ.ಎಸ್. ನಂ. 17/2017 ರ ಬಗ್ಗೆ ಹೇಳಿರುತ್ತೇನೆ ಅಂದರೆ ಸರಿ.

ದಿಃ 05-06-2016 ರಂದು ರಾತ್ರಿ 7-00 ಗಂಟೆಗೆ ನಾನು ಮತ್ತು ನನ್ನ ತಂದೆ ಹಾಗೂ ನನ್ನ ಅಣ್ಣ 1ನೇ ಆರೋಪಿಗೆ ಓನಕೆ ಹಾಗೂ ಬಡಿಗೆಯಿಂದ ಹೊಡೆದಿದ್ದರಿಂದ 1ನೇ ಆರೋಪಿಗೆ ಪ್ರಜ್ಞೆ ತಪ್ಪಿರುತ್ತದೆ, ಪ್ರಜ್ಞೆ ತಪ್ಪಿದ ನಂತರ ಆರೋಪಿ 2 ರಿಂದ 7 ಇವರು ಅಂಬುಲೆನ್ಸನಲ್ಲಿ ಗುರುಮಿಠಕಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಅಂದರೆ ಸರಿಯಲ್ಲ. ನಾನು ಹೋಮ್ ಗಾರ್ಡ ಆಗಿ ಕರ್ತವ್ಯ ನಿರ್ವಹಿಸಿರುವುದ್ದರಿಂದ ಪಿ.ಎಸ್.ಐ ಅವರ ಮೇಲೆ ಪ್ರಭಾವ ಬೀರಿ ಆರೋಪಿತರು ಮಾಡಿರುವಂತಹ ಕೇಸು ಪ್ರಭಾವ ಬೀರಿ ನೊಂದಣಿ ಆಗದಂತೆ ನೋಡಿಕೊಂಡಿರುತ್ತನೆ ಅಂದರೆ ಸರಿಯಲ್ಲ. ನಾನು 1ನೇ

ಆರೋಪಿಗೆ ಒನಕೆಯಿಂದ ಹೊಡೆದಿದ್ದರಿಂದ ಅವರ ಸ್ಥಿತಿ ಚಿಂತಜನಕವಾಗಿತ್ತು ಅಂದರೆ ಸರಿಯಲ್ಲ. 1 ನೇ ಆರೋಪಿ ಸುಮಾರು 2 – 3 ಗಂಟೆ ಗುರುಮಿಠಕಲ್ ಆಸ್ಪತ್ರೆಯಲ್ಲಿ ಇದ್ದರೂ ಸಹ ಅವರು ಮಾಡಿದಂತಹ ಕೇಸನ್ನು ನೊಂದಣಿಯಾಗದಂತೆ ನೋಡಿಕೊಂಡಿರುತ್ತೆನೆ ಅಂದರೆ ಸರಿಯಲ್ಲ. 1 ನೇ ಆರೋಪಿ ಸ್ಥಿತಿ ಚಿಂತಜನಕವಾಗಿದ್ದರಿಂದ ಗುರುಮಿಠಕಲ್ ವೈದ್ಯರು ಅಂಬುಲೆನ್ಸನಲ್ಲಿ ಯುನೈಟೆಡ್ ಆಸ್ಪತ್ರೆ ಗುಲಬರ್ಗಾಕ್ಕೆ ಕಳುಯಿಸಿರುತ್ತಾರೆ ಅಂದರೆ ಸರಿಯಲ್ಲ. ನಾನು ನಿಪಿ 1 ರಲ್ಲಿ 1 ನೇ ಆರೋಪಿ ನನಗೆ ಮನೆ ಬಿಟ್ಟು ಹೋಗಿರಿ ಅಂತಾ ನಮ್ಮ ಜೊತೆ ಜಗಳ ಮಾಡುತ್ತಿದ್ದರು ಎಂದು ಬರೆದಿರುತ್ತೆನೆ ಅಂದರೆ ಸರಿ. ನಿಜವಾಗಿ ನಾನು 1 ನೇ ಆರೋಪಿಯ ದತ್ತಕ ಪುತ್ರನಾಗಿದ್ದರೆ ನನ್ನ ಚಿಕ್ಕಪ್ಪ 1 ನೇ ಆರೋಪಿಯು ರಾತ್ರಿ 10-50 ಸುಮಾರು ಇತರೊಂದಿಗೆ ನಮಗೆ ಕೊಲೆ ಮಾಡುವ ಉದ್ದೇಶದಿಂದ ಹೊಂಚು ಹಾಕಿ ಕಮಾಂಡರ್ ಜೀಪಿನಲ್ಲಿ 5 ರಿಂದ 6 ಜನರನ್ನು ಕರೆದುಕೊಂಡು ನಮ್ಮ ಮೋಟಾರ್ ಸೈಕಲ್ ಹಿಂದೆನೆ ಹಿಂಬಾಲಿಸುತ್ತಿದ್ದರೂ ಎಂದು ಹೇಳುದ್ದೇನೆ ಅಂದರೆ ಸರಿ. 1 ನೇ ಆರೋಪಿ ಸಾಯುತ್ತಾನೆ ಎಂದು ತಿಳಿದುಕೊಂಡು ಆ ಕೇಸು ನಮ್ಮ ಮೇಲೆ ಬರುತ್ತದೆ ಎಂದು ನಾನು ಮತ್ತು ಪೋಲಿಸರು ಹಾಗೂ ವೈದ್ಯಾಧಿಕಾರಿಗಳು ಸೇರಿಕೊಂಡು ಆರೋಪಿತರ ಮೇಲೆ ಈ ಕೇಸನ್ನು ಮಾಡಿರುತ್ತೇನೆ ಅಂದರೆ ಸರಿಯಲ್ಲ. ಯುನೈಟೆಡ್ ಆಸ್ಪತ್ರೆಯಲ್ಲಿಯು ಸಹ ಪೋಲಿಸರು ಮತ್ತು ನಾನು ಪ್ರಭಾವ ಬೀರಿ 1 ನೇ ಆರೋಪಿ ಮೇಲಿನಿಂದ ಬಿದ್ದಿರುತ್ತಾನೆ ಎಂದು ಕೇಸ್ ಹಿಸ್ಟರಿಯಲ್ಲಿ ಬರೆದಿರುತ್ತೀರಿ ಎಂದರೆ ಆ ಸಮಯದಲ್ಲಿ ನಾನು ಗಾಯಗಳು ಹೊಂದಿ ಗುಲಬರ್ಗಾ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದೆ ಎಂದು ನುಡಿಯುತ್ತಾರೆ. ಮುಂದುವರೆದು ಅವರು ಯುನೈಟೆಡ್ ಆಸ್ಪತ್ರೆಗೆ ದಾಖಲಾಗಿದ್ದು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ಮೇಲೆ ಕೊಲೆ ಕೇಸ್ ಆಗುತ್ತದೆ ಎಂದು ಅವರೆಲ್ಲರೂ ಜೀಪ್ ತೆಗೆದುಕೊಂಡು ನಾವು ದ್ವಿ-ಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ನಮ್ಮ ಹಿಂದುಗಡೆ ಬಂದು ದ್ವಿ-ಚಕ್ರ ವಾಹನಕ್ಕೆ ಡಿಕ್ಕಿ

ಪಡೆಸಿರುತ್ತಾರೆ ಹಾಗೂ ಈ ಕೇಸನ್ನು ಮಾಡಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿತರು ಯಾವುದೇ ಜೀಪ್‌ನಲ್ಲಿ ಬಂದಿರುವುದಿಲ್ಲ ಮತ್ತು ನಮ್ಮ ದ್ವಿ-ಚಕ್ರ ವಾಹನಕ್ಕೆ ಡಿಕ್ಕಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಅವರು ಕೇಸು ಮಾಡುತ್ತಾರೆ ಎಂದು ತಿಳಿದು ನಾನು ಈ ಕೇಸನ್ನು ನಾನು ಆರೋಪಿತರ ಮೇಲೆ ಮಾಡಿರುತ್ತೇನೆ ಅಂದರೆ ಸರಿಯಲ್ಲ. 1ನೇ ಆರೋಪಿಗೆ ಅವರ ಸ್ಥಿತಿ ಚಿಂತಜನಕವಾಗಿದ್ದರಿಂದ ಉಳಿದ ಆರೋಪಿತರು ಅವರಿಗೆ ಸಹಾಯ ಮಾಡುತ್ತಿದ್ದರೂ ಅಂದರೆ ಸರಿಯಲ್ಲ. ಯುನೈಟೆಡ್ ಆಸ್ಪತ್ರೆಯಲ್ಲಿ 1ನೇ ಆರೋಪಿ ಸ್ಥಿತಿ ಚಿಂತಜನಕವಾಗಿದ್ದರಿಂದ ಸದರಿ ಆರೋಪಿತರಿಗೆ ಪೋಲಿಸರು ಯುನೈಟೆಡ್ ಆಸ್ಪತ್ರೆಯಲ್ಲಿ ದೇವಮ್ಮ ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿಯೂ ಸಹ ನಾವು ದುಡ್ಡನ್ನು ಚೆಲ್ಲಿರುತ್ತೇವೆ ಆದಾಗ್ಯೂ ದೇವಮ್ಮ ಇವರ ಹೇಳಿಕೆಯನ್ನು ಪಡೆದುಕೊಂಡರು ಅಂದರೆ ಸರಿಯಲ್ಲ. ದೇವಮ್ಮ ಇವರು 1ನೇ ಆರೋಪಿತರಿಗೆ ಗಾಯಗಳು ನಾವೆಲ್ಲ ಹೊಡೆದಿದ್ದರಿಂದ ಗಾಯಗಳು ಆಗಿರುತ್ತವೆ ಎಂದು ಮತ್ತು ಅದಕ್ಕೆ ನಾವೇ ಕಾರಣ ಎಂದು ಹೇಳಿರುತ್ತಾರೆ ಅಂದರೆ ಸರಿಯಲ್ಲ. ಆ ದೂರಿನಲ್ಲಿ ಪೋಲಿಸರು ದೇವಮ್ಮ ಇವರ ಸಹಿಯನ್ನು ಪಡೆದಿರುತ್ತಾರೆ ಅಂದರೆ ಆ ದೂರಿನ ಬಗ್ಗೆ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ದೇವಮ್ಮ ಇವರು ಕೊಟ್ಟಂತಹ ಮೂಲ ದೂರನ್ನು ಆಸ್ಪತೆಯ ಹೊರಗಡೆ ಬಂದು ಹರಿದು ಹಾಕಿ ಆಕೆಯ ಸಹಿಯನ್ನು ಪೊರ್ಜರಿಯಾಗಿ ಅಪಘಾತವಾದ ಕೇಸು ಎಂದು ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಗೆ ದೂರಿನಲ್ಲಿರುವಂತಹ ಸಹಿ ಹಾಗೂ ಓ.ಎಸ್. ನಂ. 17/2017 ರಲ್ಲಿ ಇರುವಂತಹ ದೇವಮ್ಮ ಇವರ ಸಹಿ ಬೇರೆ ಬೇರೆಯಾಗಿರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿದರಾರರು ಮುಂದು ದೇವಮ್ಮ ಇವರು ಕೊಟ್ಟಂತಹ ದೂರಿನಲ್ಲಿ ಹಾಗೂ ಓ.ಎಸ್. ನಂ. 17/2017 ರಲ್ಲಿ ಇರುವಂತಹ ಸಹಿ ಒಂದೇ ಆಗಿರುತ್ತದೆ ಎಂದು ನುಡಿಯುತ್ತಾರೆ. ಕಾಲ ಕಾಲಕ್ಕೆ ಆರೋಪಿತರಿಗೆ ತೊಂದರೆ ಕೊಟ್ಟು

ದೇವಮ್ಮ ಇವರ ಆಸ್ತಿಯನ್ನು ನುಂಗಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನಿಪಿ1 ರಲ್ಲಿ 1ನೇ ಆರೋಪಿ ಬಡಿಗೆ ತಿರುಗಿಸಿ ಜೀವ ತೆಗೆಯಿರಿ ಎಂದು ನಿಪಿ1 ರಲ್ಲಿ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಉಳಿದ ಆರೋಪಿತರು 1ನೇ ಆರೋಪಿಗೆ ಉಪಚಾರಕ್ಕಾಗಿ ಸಹಾಯ ಮಾಡಬಾರದು 1ನೇ ಆರೋಪಿ ಬೇಗ ಸಾಯಲಿ ಎಂಬ ಉದ್ದೇಶದಿಂದ ಆರೋಪಿ ನಂ. 2, 6 ಮತ್ತು 7 ಇವರನ್ನು ಗುರುಮಿಠಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ಪೋಲಿಸರಿಂದ ದಸ್ತಗಿರಿ ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. 4ನೇ ಆರೋಪಿ 1ನೇ ಆರೋಪಿಯೊಂದಿಗೆ ಯುನೈಟೆಡ್ ಆಸ್ಪತ್ರೆಗೆ ಹೋದಾಗ ಯುನೈಟೆಡ್ ಆಸ್ಪತ್ರಯಲ್ಲಿ ದಿಃ 06-07-2016 ರಂದು ದಸ್ತಗಿರಿ ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ಯುನೈಟೆಡ್ ಆಸ್ಪತ್ರೆಯಲ್ಲಿ 1ನೇ ಆರೋಪಿ ದಿಃ 07-06-216 ರಂದು ಮೃತಪಟ್ಟಿರುತ್ತಾನೆ ಅಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ದ್ವಿ-ಚಕ್ರ ವಾಹನಕ್ಕೆ ಕಮಾಂಡರ್ ವಾಹನ ಡಿಕ್ಕಿ ಪಡಿಸದೇ ಇದ್ದರೂ ಸಹ ಅವರ ಮೇಲೆ ನಾನು ಸುಳ್ಳು ಕೇಸು ಮಾಡಿರುತ್ತೆನೆ ಅಂದರೆ ಸರಿಯಲ್ಲ. ಈ ಕೇಸಿನಲ್ಲಿ ಹಾಜರು ಪಡಿಸಿದಂತಹ ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ. ಜೀಪ್ ದ್ವಿ-ಚಕ್ರ ವಾಹನದ ಹಿಂಭಾಗಕ್ಕೆ ಡಿಕ್ಕಿ ಮಾಡಿದರೆ ದ್ವಿ-ಚಕ್ರ ವಾಹನದ ಹಿಂಭಾಗ ಜಖಂ ಆಗುತ್ತದೆ ಅಂದರೆ ಸರಿ. ನಿಪಿ 2 ಮತ್ತು 3 ರಲ್ಲಿ ದ್ವಿ-ಚಕ್ರ ವಾಹನ ಹಿಂಭಾಗ ಜಖಂ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 2 ಮತ್ತು 3 ರಲ್ಲಿ ದ್ವಿ-ಚಕ್ರ ವಾಹನದ ಮುಂಭಾಗ ಜಖಂ ಆಗಿರುತ್ತದೆ ಅಂದರೆ ಸರಿ. ದ್ವಿ-ಚಕ್ರ ವಾಹನ ನಾನೇ ಜಖಂಗೊಳಿಸಿ ಠಾಣೆಯಲ್ಲಿ ಇಟ್ಟು ನಿಪಿ 2 ಮತ್ತು 3 ನ್ನು ಸೃಷ್ಟಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಿಪಿ 2 ಮತ್ತು 3 ನ್ನು ಯಾರು ತೆಗದಿರುತ್ತಾರೆ ಯಾರ ಸಮಕ್ಷಮ ತೆಗೆದಿರುತ್ತಾರೆ ಯಾವಾಗ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಕೃತ್ಯ ನಡೆದ ಸ್ಥಳದಿಂದ ಸದರಿ ದ್ವಿ-ಚಕ್ರ

ವಾಹನವನ್ನು ಪೋಲಿಸ ಠಾಣೆಗೆ ಯಾರು ತೆಗೆದುಕೊಂಡು ಹೋದರು ಅಂದರೆ ಸಾಕ್ಷಿದಾರರು ಪೋಲಿಸರು ತೆಗೆದುಕೊಂಡು ಹೋಗಿರಬಹುದು ಎಂದು ನುಡಿಯುತ್ತಾರೆ. ಸದರಿ ಸ್ಥಳದಿಂದ ಪೋಲಿಸ ಠಾಣೆಗೆ ದ್ವಿ-ಚಕ್ರ ವಾಹನವನ್ನು ಯಾರು ತೆಗೆದುಕೊಂಡು ಹೋದರು ಎಂದು ವಿಚಾರಣೆ ಮಾಡಿರುತ್ತೀರಾ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಜೀಪ ಮತ್ತು ಕಮಾಂಡರ್ ಜೀಪ್ ಹೇಗೆ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ನಿಪಿ 6 ಮತ್ತು 7 ಮಹಿಂದರ ಕಮಾಂಡರ್ ಜೀಪನ ಮುಂಭಾಗ ಜಖಂ ಕಾಣುತ್ತದೆ, ಸೈಡ್ ಇಂಡಿಕೇಟರ್, ಒಂದು ಹೆಡ್ ಲೈಟ್ ಹಾಗೂ ಮುಂದಿನ  ಜಖಂ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 6 ಮತ್ತು 7 ರಲ್ಲಿ ಇರುವಂತಹ ಜೀಪ್ ಕಮಾಂಡ್ ಜೀಪ್ ಆಗಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಕಮಾಂಡರ್ ಜೀಪ್‌ನ ಫೋಟೋಗಳನ್ನು ತೋರಿಸಿದ್ದು, ಸದರಿ ಫೋಟೋಗಳನ್ನು ಪರಿಶೀಲಿಸಿದ್ದು, ಸಾಕ್ಷಿ ಆ ಫೋಟೋಗಳ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಿದ್ದು, ಆ ಕಾರಣದಿಂದ ತನಿಖಾಧಿಕಾರಿಗೆ ಆ ವಾಹನವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಎಂದು ನಿರ್ದೇಶನ ನೀಡಬೇಕು ಅಂದರೆ ಸರಿ.  ನಿಪಿ 6 ಮತ್ತು 7 ರಲ್ಲಿ ತೋರಿಸಿದಂತಹ ಕಮಾಂಡರ್ ಜೀಪ ಇರುವುದಿಲ್ಲ ಅದಕ್ಕೆ ಹೊಸ ಸ್ಟೀಕರ್ ಗಳನ್ನು ಸೃಷ್ಟಿಸಿ ಅಂಟಿಸಿರುತ್ತೇವೆ ಅಂದರೆ ಸರಿಯಲ್ಲ. ಸತ್ಯಾಂಶವನ್ನು ಮರೆಮಾಚಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವುದಕ್ಕಾಗಿ ಈ ಕೇಸನ್ನು ಮಾಡಿರುತ್ತೆನೆ ಅಂದರೆ ಸರಿಯಲ್ಲ. ನನಗೆ ಮದುವೆ ಆಗಿರುವುದಿಲ್ಲ. ಗುರುಮಿಠಕಲ್ ಗೆ ಕೊಟ್ಟಂತಹ ಹೆಣ್ಣು ಮಗಳಿಗೆ ಇಬ್ಬರು ಮಕ್ಕಳಿದ್ದರೂ ಸಹ ಸಂಸಾರವನ್ನು ಬಿಡಿಸಿ, ಆಕೆಯ ಗಂಡನಿಗೆ ಭಯ ಹುಟ್ಟಿಸಿ ಆ ಹೆಣ್ಣು ಮಗಳನ್ನು ನನ್ನ ಹತ್ತಿರ ಇಟ್ಟುಕೊಂಡಿರುತ್ತೆನೆ ಅಂದರೆ ಸರಿಯಲ್ಲ. ನಾನು ಹೋಮ್ ಗಾರ್ಡ ಇದ್ದಾಗ ಮಧ್ಯವರ್ತಿಯಾಗಿ ಅಮಾಯಕ

ಜನರಿಂದ ಹಣವನ್ನು ವಸೂಲಿ ಮಾಡುತ್ತಿದೆ ಅದೇ ಕರ್ತವ್ಯ ಆಗಿತ್ತು ಅಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.